ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1436
ಸದಸ್ಯರ ಹೆಸರು	:	ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	17.03.2021
ಉತ್ತರಿಸುವ ಸಚಿವರು	:	ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಸಚಿವರು.

ಕ್ರ.ಸಂಖ್ಯೆ	ಪ್ರಶ್ನೆ	ಉತ್ತರ
(ಅ)	ಉಡುಪಿ ಜಿಲ್ಲೆಯಲ್ಲಿ ಮರೀನಾ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕರಡು ಯೋಜನೆ ರೂಪಿಸಲಾಗಿದೆಯೇ; ಅದಕ್ಕೆ ತಗಲುವ ಅಂದಾಜು ವೆಚ್ಚ ಎಷ್ಟು; (ಯೋಜನೆಯ ಡಿಪಿಎಆರ್ ಮತ್ತು ಅಂದಾಜು ವೆಚ್ಚದ ಪ್ರತಿಯನ್ನು ಒದಗಿಸುವುದು)	ಉಡುಪಿ ಜಿಲ್ಲೆಯಲ್ಲಿ ಮರೀನಾ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ/ ಕರ್ನಾಟಕ ಜಲಸಾರಿಗೆ ಮಂಡಳಿ ವತಿಯಿಂದ ಪ್ರಸ್ತುತ ಯಾವುದೇ ಯೋಜನೆ ರೂಪಿಸಲಾಗಿರುವುದಿಲ್ಲ.
(ಆ)	ರಾಷ್ಟ್ರೀಯ ಜಲಹೆದ್ದಾರಿ 105 (ಉದ್ಯಾವರ ಹೊಳೆ) ಇಲ್ಲಿ ಒಳನಾಡು ಸರಕು ಸಾಗಾಣಿಗೆ ಸಂಬಂಧಿಸಿದಂತೆ ಅಭಿವೃದ್ಧಿಪಡಿಸುವ ಯಾವುದಾದರೂ ಯೋಜನೆಗಳು ರಾಜ್ಯ ಸರ್ಕಾರದ ಮುಂದಿದೆಯೇ; ಈ ಜಲಮಾರ್ಗವು ಉದ್ದೇಶಿತ ಮರೀನಾ ಯೋಜನೆಯ ಭಾಗವಾಗಿದೆಯೇ;	ಕೇಂದ್ರ ಸರ್ಕಾರದ ಭಾರತೀಯ ಒಳನಾಡು ಜಲಸಾರಿಗೆ ಪ್ರಾಧಿಕಾರವು ಉಡುಪಿ ಜಿಲ್ಲೆಯ ಮಲ್ಪೆ ಬಂದರಿನ ಹತ್ತಿರ ಉದ್ಯಾವರ ಹೊಳೆಯನ್ನು ರಾಷ್ಟ್ರೀಯ ಜಲಹೆದ್ದಾರಿ 105 ಎಂದು 2016 ರಲ್ಲಿ ಘೋಷಿಸಿ ಅಧಿಸೂಚನೆ ಹೊರಡಿಸಿರುತ್ತದೆ. ಸದರಿ ಪ್ರಾಧಿಕಾರವು ಖಾಸಗಿ ಸಂಸ್ಥೆಯ ಮೂಲಕ ಕರ್ನಾಟಕ ರಾಷ್ಟ್ರೀಯ ಜಲಹೆದ್ದಾರಿ ಎಂದು ಘೋಷಿತವಾಗಿರುವ ಒಟ್ಟು 11 ನದಿಗಳ ಪೈಕಿ 5 ನದಿಗಳ ಮೂಲಕ ಪ್ರಯಾಣಿಕೆ ಮತ್ತು ಸರಕು ಸಾಗಾಣೆ ಮಾಡುವ ಕುರಿತು ಯೋಜಣೆಯನ್ನು ನಡೆಸಿ ಸಾಧ್ಯತಾ ವರದಿ/ಯೋಜನಾ ವರದಿಯನ್ನು ತಯಾರಿಸಿರುತ್ತಾರೆ. ಸದರಿ ಸಂಸ್ಥೆಯು ಸಲ್ಲಿಸಿದ ಯೋಜಣೆಯಲ್ಲಿ ಉದ್ಯಾವರ ಹೊಳೆಯು ಒಳಗೊಂಡಿರುವುದಿಲ್ಲ.
(ಇ)	ಅದಾನಿ ಯುಪಿಸಿಎಲ್ ಪ್ರಸ್ತಾಪಿಸಿರುವ ವಿಸ್ತರಣಾ ಯೋಜನೆಯಲ್ಲಿ ಪ್ರಸ್ತಾಪಿತ ಹೆಚ್ಚುವರಿ ಜಾಗವು ಉದ್ಯಾವರ ಹೊಳೆಯ ದಂಡೆಯಲ್ಲಿ ಬರುತ್ತದೆಯೇ?	ಉದ್ಭವಿಸುವುದಿಲ್ಲ.

ಕಡತ ಸಂಖ್ಯೆ: IDD 92 PSP 2021 (E-461774)

(ಎಸ್. ಅಂಗಾರ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು